ಕನಸ್ಟ್ರಕ್ಷನ್ ಸರ್ಜರಿ!' ಮೂಳೆಗಳನ್ನು ಸರಿಪಡಿಸಬೇಕು. ಸ್ಕಿನ್ ಕವರ್ ಮಾಡೋದಕ್ಕೆ ಪ್ಲಾಸ್ಟಿಕ್ ಸರ್ಜರಿ ಆಗಬೇಕಿದೆ. ಬಲಗಣ್ಣಿಗೆ ಕೃತಕ ಕಣ್ಣನ್ನು ಅಳವಡಿಸಬೇಕಿದೆ. ಇವೆಲ್ಲಕ್ಕೂ ಬೇಕಾಗುವ ದೊಡ್ಡ ಮೊತ್ತದ ಹಣವನ್ನು ನೀವು ಜೋಡಿಸಿಕೊಳ್ಳಿ. ವರ್ಷದೊಳಗೆ ಅವಳನ್ನು ಮೊದಲಿನಂತೆ ಮಾಡುವ ಜವಾಬ್ದಾರಿ ನಮ್ಮದು' ಎಂದರು.

ಡಾಕ್ಟರ್ ಜೊತೆ ಮಾತನಾಡಿದ ಮೇಲೆ ಅಮರ್ ಸೀದಾ ಮನೆಗೆ ಬಂದ.

'ನಿನ್ನ ತಮ್ಮ ಹೇಗಿದಾನೆ ಅಮರ್? ಜೈಲಿಗೆ ಹೋಗಿ ಬಂದ್ಯಾ?' ಸಾವಿತ್ರಿ ಕೇಳಿದಳು.

'ಆಸ್ಪತ್ರೆಗೆ ಹೋಗಿದ್ದೆ ಅಮ್ಮಾ, ನಮ್ಮವನು ಮಾಡಿದ ಘನಕಾರ್ಯಕ್ಕೆ ಬಲಿಯಾದ ಸಾವೇರಿಯನ್ನು ನೋಡಿ ಬಂದೆ. ಆ ಹುಡುಗಿಯನ್ನು ಆ ಸ್ಥಿತಿಯಲ್ಲಿ ನೋಡ್ತಿದ್ರೆ ಕರುಳು ಹಿಂಡಿದಂತಾಗ್ತಿತ್ತು. ಅಪ್ಪ, ನೀನು ಒಂದ್ಸಲ ಹೋಗಿ ಸಾವೇರಿಯನ್ನು ನೋಡಿ ಧೈರ್ಯ ಹೇಳಿ ಬನ್ನಿ!'

'ನನ್ನ ಮಗನ್ನ ಜೈಲಿಗೆ ಹೋಗೋ ಹಾಗೆ ಮಾಡಿದ ಹುಡುಗಿಯನ್ನು ಮಾತಾಡ್ಸೋದಾ?' ಕೋಪದಿಂದ ಹೇಳಿದಳು.

'ಅಮ್ಮಾ ನಿನ್ನ ಮಗ ಸರಿಯಾದ ಮಾರ್ಗದಲ್ಲಿ ನಡೆದಿದ್ರೆ ಜೈಲು ಪಾಲಾಗ್ತಿರಲಿಲ್ಲ. ತಪ್ಪು ಹಾದಿಯಲ್ಲಿ ಸಾಗಿದ. ಮಾಡಬಾರದ್ದು ಮಾಡಿ ಜೈಲು ಪಾಲಾದ. ಶಿಕ್ಷೆ ಮುಗಿಸಿ ಹೊರಬಂದ ಮೇಲೆ ಅವನು ಮಾಮೂಲು ಜೀವನ ನಡೆಸ್ತಾನೆ. ಆದ್ರೆ ಆ ಹುಡ್ಗಿ ಗತಿ! ಮಾಡದ ತಪ್ಪಿಗೆ ಆಸಿಡ್ ದಾಳಿಯಿಂದ ವಿಕಾರಗೊಂಡ ಮುಖ ಹೊತ್ತುಕೊಂಡು ಮಾನಸಿಕ ಸಮಸ್ಯೆಗಳೊಂದಿಗೆ ಇಡೀ ಜೀವನ ಕಳೀಬೇಕಾಗುತ್ತೆ. ಅದು ಎಷ್ಟು ದೊಡ್ಡ ಶಿಕ್ಷೆ ಅನ್ನೋದು ನಿಂಗೇನಾದ್ರೂ ಗೊತ್ತೇನಮ್ಮಾ!' ನೋವಿನಿಂದ ಹೇಳಿದ ಅಮರ್.

ಅವನ ಮಾತಿಗೆ ತಾಯಿಯ ಮೌನವೇ ಉತ್ತರವಾಯ್ತು.

* * *

ಲ್ಯಾಪ್‌ಟಾಪ್ ಮುಂದಿಟ್ಟುಕೊಂಡು ಅಮೆರಿಕನ್ ಡಾಲರ್‌ಗಳನ್ನು ಡ್ರಾ ಮಾಡಿ ಸಾವೇರಿ ಚಿಕಿತ್ಸೆಗೆ ಆಸ್ಪತ್ರೆ ಅಕೌಂಟಿಗೆ ಅಮರ್ ಜಮಾ ಮಾಡಿದ. ಹೈದರಾಬಾದಿನಲ್ಲಿ ಇದ್ದಷ್ಟು ದಿವಸವೂ ಆಸ್ಪತ್ರೆಗೆ ಹೋಗಿ ಸಾವೇರಿ ಸಮೀಪ ಕುಳಿತು ಅವಳಿಗೆ ಧೈರ್ಯ ತುಂಬಿ ಬರುತ್ತಿದ್ದ.

ಒಣಗಿ ನಿಂತಿದ್ದ ಮರ ಚಿಗುರುವಂತೆ ಸಾವೇರಿ ನಿಧಾನವಾಗಿ ಚೇತರಿಸಿಕೊಳ್ಳತೊಡಗಿದಳು. ಅವಳಲ್ಲಿದ್ದ ಆತ್ಮವಿಶ್ವಾಸ, ಬೇಗ ಚೇತರಿಸಿಕೊಂಡು ಮೊದಲಿನಂತಾಗಬೇಕೆಂಬ ಛಲವನ್ನು ನೋಡಿ ಚಕಿತನಾದ ಅಮರ್.

ಬದುಕೇ ಒಂದು ಸುಂದರ! ಬದುಕುವುದೇ ಒಂದು ಸಾಹಸ!

ಲೋಕದಲ್ಲಿ ಕ್ರೌರ್ಯ, ಕಾಠಿಣ್ಯದ ಜೊತೆಗೆ ಅನುರಾಗ, ಆತ್ಮೀಯತೆಯೆಂಬ ಮಂಜಿನ ಹನಿ ಮನಸ್ಸನ್ನು ಆವರಿಸಿಕೊಂಡು ತಣಿಸಿ ಕೆಟ್ಟದ್ದನ್ನು ಮರೆಯುವಂತೆ ಮಾಡುತ್ತದೆ. ನಿಶಾಂತ್ ಅಗ್ನಿಪರ್ವತದಲ್ಲಿ ವಿಷಾಗ್ನಿಯನ್ನು ಬಿತ್ತಿದರೆ, ಅಮರ್ ಲಾವಾದಂತೆ ಭೂಮಿಯನ್ನು ಸಸ್ಯಶ್ಯಾಮಲವನ್ನಾಗಿಸುತ್ತಿದ್ದ.

ಒಂದೇ ತಾಯಿಯ ಮಕ್ಕಳಲ್ಲಿ ವಿಭಿನ್ನ ಮನಸ್ಸತ್ವ! ಅದು ಹೇಗೆ ಸಾಧ್ಯ?

ಅಮರ್ ತನ್ನ ಬಗ್ಗೆ ತೋರಿಸುವ ಆದರಾಭಿಮಾನಗಳನ್ನು ಗಮನಿಸುತ್ತಿದ್ದ ಸಾವೇರಿ ಮನಸ್ಸನ್ನು ಕಾಡಿದ ಪ್ರಶ್ನೆ!

ಈಗ ಅವಳು ಉದುರುವ ಎಲೆಯಲ್ಲ!

ಚಿಗುರುತ್ತಿರುವ ಸಸಿ!

'ಆಸಿಡ್ ಗಾಯಗಳು ಅಷ್ಟು ಬೇಗ ವಾಸಿಯಾಗುವುದಿಲ್ಲ. ಕೆಲವರಿಗೆ ಇನ್ಫೆಕ್ಷನ್ ಆಗಿ ಬಹಳ ತೊಂದರೆ ಪಡುತ್ತಾರೆ ಎಂದು ಕೇಳಿದ್ದೇನೆ. ಮತ್ತೆ ಮೊದಲಿನಂತಾಗಬೇಕೆಂಬ ಛಲ, ನಿಮ್ಮ ಆತ್ಮವಿಶ್ವಾಸ ನಿಮ್ಮನ್ನು ಬೇಗ ಚೇತರಿಸಿಕೊಳ್ಳುವಂತೆ ಮಾಡಿತು. ನಾಳೆ ರಾತ್ರಿ ನಾನು ಅಮೆರಿಕಾ ಹೊರಟು ಹೋಗುತ್ತಿದ್ದೇನೆ. ಮತ್ತೆ ಆರು ತಿಂಗಳ ನಂತರ ಹಿಂದಿರುಗಿ ಬರುತ್ತೇನೆ. ಆಗ ನೀವು ಉದ್ಯೋಗಸ್ಥೆಯಾಗಿ ಹಸನ್ಮುಖಿಯಾಗಿ ನನಗೆ ಎದುರಾಗಬೇಕು'.

ಅಮರನ ಮಾತುಗಳನ್ನು ಕೇಳಿ ಸಂಕೋಚದಿಂದ ತಲೆ ತಗ್ಗಿಸಿದಳು ಸಾವೇರಿ.



ನನ್ನ ಬಾಳಿಗೆ ಹೊಸ ವಸಂತ ತಂದವರು ನೀವೇ ಅನ್ನಬೇಕೆಂದುಕೊಂಡಳು. ಅವಳ ಕದಪುಗಳು ಕೆಂಪೇರಿದ್ದು ಅಮರ್ ಕಣ್ಣುಗಳಿಂದ ಮರೆಯಾಗಲಿಲ್ಲ.

* * *

ವಯಸ್ಸಿಗೆ ಮೀರಿದ ಈ ಕ್ರೌರ್ಯ ತಮ್ಮನಿಗೆ ಹೇಗೆ ಬಂತು? ಅವನ ಸುತ್ತಲೂ ಇದ್ದ ವಾತಾವರಣ! ಟೀವಿ ಚಾನೆಲ್‌ಗಳಲ್ಲಿ ಬರುವ ಕ್ರೈಮ್ ಷೋಗಳು, ಕ್ಲಬ್ ಪಬ್‌ಗಳ ಪಾರ್ಟಿಗಳಲ್ಲಿ ಕುಡಿದು ಮಜಾ ಮಾಡಿ ಎನ್ನುವ ಸಂದೇಶವನ್ನು ಸಾರುವ ಚಲನಚಿತ್ರಗಳು, ದ್ವೇಷವನ್ನು ಬಿತ್ತುವ ಧಾರಾವಾಹಿಗಳು ಇಂದಿನ ಯುವಜನಾಂಗದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತಿವೆ. ಯುವತಿಯನ್ನು ಯುವಕ ತಬ್ಬಿಕೊಳ್ಳುವುದು, ಮುದ್ದಿಸುವುದನ್ನು ತೋರಿಸುವುದರಿಂದ ನಷ್ಟವೇನೂ ಆಗುವುದಿಲ್ಲ, ಆದರೆ ಯುವತಿಯ ಮೇಲೆ ಆಸಿಡ್ ಸುರಿಯುವುದು, ಕೊಲೆ ಮಾಡುವುದು, ಬಲಾತ್ಕರಿಸುವುದು ಇಂಥ ದೃಶ್ಯಗಳು ಯುವಕರನ್ನು ತಪ್ಪು ದಾರಿಗೆಳೆಯುತ್ತಿವೆ.

ಹಿಂದಿನ ದಿನಗಳಲ್ಲಿ ಹಳೆಯ ಸಿನಿಮಾಗಳಲ್ಲಿನ ನಾಯಕರು ಧೀರೋದಾತ್ತರೂ, ಆದರ್ಶವ್ಯಕ್ತಿಗಳೂ ಆಗಿದ್ದು, ಸಮಾಜಕ್ಕೆ ಉತ್ತಮ ಸಂದೇಶಗಳನ್ನು ಸಾರುತ್ತಿದ್ದರು. ಹಿರಿಯರನ್ನು, ಹೆಣ್ಣುಮಕ್ಕಳನ್ನು ಗೌರವಿಸುವ ಮೌಲ್ಯಗಳಿಂದ ತುಂಬಿರುತ್ತಿದ್ದವು. ಆದರೆ ಈಗ?

ಅಮೆರಿಕಾ ತೆರಳುವ ಮುಂಚೆ ತಮ್ಮನನ್ನು ನೋಡಲು ಜೈಲಿಗೆ ಹೋದ ಅಮರ್.

'ಇಂಡಿಯಾಗೆ ನೀನು ಬಂದು ಮೂರು ತಿಂಗಳಾಗ್ತಿದೆ. ಈಗಲಾ ನೀನು ನನ್ನನ್ನು ನೋಡೋದಕ್ಕೆ ಬರೋದು?' ಅಷ್ಟು ದಿವಸಗಳಾದರೂ ತನ್ನನ್ನು ನೋಡಲು ಬಾರದೆ ಇದ್ದ ಅಣ್ಣನನ್ನು ನೋಡಿ ಆಕ್ಷೇಪಿಸಿದ.

'ಬರಬೇಕು ಅನ್ನಿಸಲಿಲ್ಲ. ಈಗಲೂ ಅಮ್ಮನ ಬಲವಂತಕ್ಕೆ ಬಂದೆ. ನೀನು ಎಂತಹ ತಪ್ಪು ಮಾಡಿದೆ ಅನ್ನೋದನ್ನು ಈಗಲಾದರೂ ಅರ್ಥ ಮಾಡಿಕೊಂಡೆಯಾ?' ಕೇಳಿದ ಅಮರ್.

ನಿಶಾಂತ್ ಚಿಕ್ಕ ಮಕ್ಕಳಂತೆ ಅತ್ತುಬಿಟ್ಟ.

'ನಿನ್ನ ಪ್ರೀತಿಯನ್ನು ಹಾಳು ಮಾಡಿದ ಹುಡುಗಿಯನ್ನು ನಿನ್ನ ಕೈಲಿ ಏನೂ ಮಾಡೋದಕ್ಕೆ ಆಗಲಿಲ್ಲ ಅಂತ ನನ್ನ ಸ್ನೇಹಿತ ನನ್ನನ್ನು ರೇಗಿಸಿದ. ನನ್ನಲ್ಲಿ ಹಗೆ ಹೊಗೆಯಾಡ್ತು. ತಲೆ ಕೆಟ್ಟುಹೋಯ್ತು. ಆಸಿಡ್ ಬಾಟ್ಲು ಕೊಳ್ಳೋದು, ಸಾವೇರಿ ಮೇಲೆ ಸುರಿಯೋದು ಎಲ್ಲಾ ಅನಿರೀಕ್ಷಿತವಾಗಿ ನಡೆದುಹೋಯ್ತು. ಕ್ಷಣಿಕೋದ್ರೇಕ ನನ್ನನ್ನು ಜೈಲಿನಲ್ಲಿ ಕೊಳೆಯುವ ಹಾಗೆ ಮಾಡಿತು' ಬಿಕ್ಕುತ್ತಾ ಹೇಳಿದ.

'ಕೆಲವು ವರ್ಷಗಳಷ್ಟೇ ನಿನಗೆ ಶಿಕ್ಷೆ. ಆ ಹುಡುಗಿ! ಜೀವನ ಪರ್ಯಂತ ತನ್ನ ವಿಕೃತ ರೂಪುರೇಖೆಗಳನ್ನು ನೋಡಿ ಕ್ಷೋಭಿಸುತ್ತಲೇ ಇರಬೇಕಲ್ಲ' ಎಂದವನೇ ಅಮರ್ ಅಲ್ಲಿ ನಿಲ್ಲಲಾರದೆ ಹಿಂದಿರುಗಿದ್ದ.

* * *

ಸಾವೇರಿಯನ್ನು ಅಮರ್ ಮದುವೆ ಮಾಡಿಕೊಂಡ.

'ಕನಿಕರದಿಂದ ನನ್ನನ್ನು ಮದುವೆ ಮಾಡಿಕೊಂಡ್ರಾ?' ಮೊದಲ ರಾತ್ರಿ ಪತಿಯ ಎದೆಯ ಮೇಲೆ ಒರಗಿದ್ದ ಸಾವೇರಿ ಕೇಳಿದಳು.

'ಮೊದಲು ನನ್ನ ತಮ್ಮ ಮಾಡಿದ ತಪ್ಪನ್ನು ಸರಿಪಡಿಸಬೇಕೆಂದುಕೊಂಡೆ. ನಿನ್ನ ಹಠ, ಛಲ, ಮನೋಬಲ ನನ್ನನ್ನು ಮುಗ್ಧನನ್ನಾಗಿಸಿತು. ಸೌಂದರ್ಯವನ್ನು ಕಳೆದುಕೊಂಡರೂ ಸ್ಥೈರ್ಯ ಕುಂದದ ನಿನ್ನ ಮನೋ ಸೌಂದರ್ಯ ನನ್ನನ್ನು ನಿನ್ನತ್ತ ಸೆಳೆಯಿತು. ನಿನ್ನೊಡನೆ ಮಾತನಾಡುತ್ತಿದ್ರೆ ಬೆಳದಿಂಗಳ ತಂಪನ್ನು ಆಸ್ವಾದಿಸುತ್ತಿದ್ದ ಅನುಭವವಾಗುತ್ತಿತ್ತು. ಶಾರೀರಕ ಸೌಂದರ್ಯ ತಾತ್ಕಾಲಿಕ. ಮನೋಸೌಂದರ್ಯ ಶಾಶ್ವತ. ಆ ಸೌಂದರ್ಯವನ್ನು ದಕ್ಕಿಸಿಕೊಂಡೆ' ಎಂದ ಅಮರ್ ಅವಳನ್ನು ಮತ್ತಷ್ಟು ಸಮೀಪಕ್ಕೆ ಎಳೆದುಕೊಳ್ಳುತ್ತಾ.

ಗುಬ್ಬಚ್ಚಿಯಂತೆ ಸಾವೇರಿ ಅವನ ಬೆಚ್ಚನೆಯ ಅಪ್ಪುಗೆಯಲ್ಲಿ ಹುದುಗಿ ಹೋದಳು.